ಕಷ್ಟಗಳನ್ನೂ ತಾಳಿಕೊಳ್ಳುವ, ಪರಿಹರಿಸಿಕೊಳ್ಳುವ ಶಕ್ತಿ ಬರುತ್ತದೆ; **"ತಾಪತ್ರಯಂಗಳ ತಾಳುವಂತೆ ಪ್ರೇರಿಸಿ ಆಪತ್ತು ಕಾಲಕ್ಕೆ ಧೈರ್ಯವೀಯೊ"** ಎಂಬುದು ಭಕ್ತನ ಬಿನ್ನಹವಾಗಬೇಕೆಂಬುದು ವಿಜಯದಾಸರ ಉಪದೇಶವಾಗಿದೆ.

**'ಅಲ್ಪ ಸಂತೋಷನಾಗು ಅದು ಹಾಲು ಸಕ್ಕರೆ ತುಪ್ಪ'** ಎಂದಿರುವ ವಿಜಯದಾಸರು

**'ಸಪ್ಪೆ ಮೆಲುವಾಗ ಉಪ್ಪಿನ ಯೋಚನೆ । ಉಪ್ಪು ಮೆಲುವಾಗ ಸೊಪ್ಪಿನ ಯೋಚನೆ । ಸೊಪ್ಪು ದೊರಕಿದಾಗ ತುಪ್ಪದ ಯೋಚನೆ। ತುಪ್ಪ ದೊರಕಿದಾಗ ಕುಪ್ಪೆಯ ಯೋಚನೆ । ಕುಪ್ಪೆ ದೊರಕಿದಾಗ ಕೊಪ್ಪರಿಗೆ ಯೋಚನೆ । ಕೊಪ್ಪರಿಗೆ ಉಂಟಾಗೆ ಸಪ್ತದ್ವೀಪದ ಚಿಂತೆ'**

(ಕುಪ್ಪೆ = ಗುಡ್ಡೆ)

ಎಂದು ವಿವರಿಸುತ್ತಾ, ಆಸೆಯ ಸರಪಣಿ ಹೇಗೆ ಬೆಳೆಯುವುದೆಂಬುದನ್ನು ತಿಳಿಸಿ ತೃಪ್ತಿಯ ಜೀವನ ಮಾಡುವ ಕಲೆಯನ್ನು ರೂಢಿಸಿಕೊಳ್ಳಬೇಕೆಂದು ಸೂಚಿಸಿದ್ದಾರೆ.

**'ಮನಸ್ಸು ತರಗೆಲೆಯಂತೆ ಹಗುರ, ದುರ್ವಾಸನೆ (ಆಸೆ) ಎಂಬ ಅನಿಲ ಬೀಸಲು ಕ್ಷಣವೊಂದರೊಳಗೆ ಕೋಟಿಕೋಟಿ ಯೋಜನ ಹಾರಿ ಸುತ್ತುತಲಿದೆ । ಘನಮಹಿಮ ನಿನ್ನಂಘ್ರಿ ವನಜಯುಗಳ ಊರಿ ಮನವೆಂಬ ತರಗೆಲೆಯನು ಹಾರದಂತೆ ದಯವನು ಮಾಡು ನಿನಗೆ ವಂದನೆಗೈವೆ ಹರುಷದಲಿ'**

ಎಂಬಂತಹ ಭಕ್ತಿಯುಕ್ತ ವಾಕ್ಯಗಳು ವಿಜಯದಾಸರ ಕೃತಿಗಳಲ್ಲಿ ತುಂಬಿ ತುಳುಕುತ್ತಿವೆ. ಸುಖ-ದುಃಖ, ಬಡತನ-ಸಿರಿವಂತಿಕೆ, ನಿಂದೆ-ಸ್ತುತಿ, ಲಾಭ-ನಷ್ಟಗಳೆಲ್ಲವೂ ಶ್ರೀಹರಿಯ ಇಚ್ಛೆಯಂತೆ ಅನುಭವಕ್ಕೆ ಬರುವುದೆಂಬ ನಿಲುವನ್ನು ಹೊಂದಿದ್ದ ವಿಜಯದಾಸರು,

**'ಆನಂದ ಆನಂದ ಆನಂದ ಮತ್ತೆ ಪರಮಾನಂದ । ಆನಂದನ ಕಂದನೊಲಿಯೆ ಏನಂದದ್ದೆ ವೇದವೃಂದ'**

ಎಂದು ನುಡಿದು ಭಗವಂತನು ಸರ್ವಶಬ್ದ ವಾಚ್ಯನೆಂಬ ತತ್ತ್ವ ಬೋಧ ಮಾಡಿದ್ದಾರೆ. **'ಸದಾ ಎನ್ನ ಹೃದಯದಲ್ಲಿ ವಾಸ ಮಾಡೊ ಶ್ರೀಹರೀ'** ಎಂದು ಹರಿಯನ್ನು ಪ್ರಾರ್ಥಿಸಿ, **'ತೈಲಧಾರೆಯಂತೆ ಮನಸು ಕೊಡು ಶಂಭೋ'** ಎಂದು ಮಹಾದೇವ ಶಿವನಲ್ಲಿ ಬೇಡಿದ್ದಾರೆ. ಮನುಷ್ಯನ ಆರ್ಥಿಕ, ಭೋಗ-ಭಾಗ್ಯಗಳ ಸ್ಥಿತಿ ಹೇಗೇ ಇರಲಿ, ಅತ್ಯಂತ ತೃಪ್ತಿ-ಶಾಂತಿ-ನಿರಹಂಕಾರ ಮನಸ್ಸನ್ನು ರೂಢಿಸಿಕೊಳ್ಳಲು ಅಗತ್ಯವಾದ ವಿಚಾರಧಾರೆ ವಿಜಯದಾಸರ ಕೃತಿಗಳಲ್ಲಿ ತುಂಬಿರುವುದರಿಂದ ಅವರ ಕೃತಿಗಳು ಇಂದಿಗೂ ಪ್ರಸ್ತುತವೆನಿಸುತ್ತದೆ. ಸರ್ಕಾರಕ್ಕೆ ಸಲ್ಲಿಸಬೇಕಾದ ತೆರಿಗೆಗಳನ್ನು ಸಂತೋಷವಾಗಿ ಸಲ್ಲಿಸಿ, **'ಕೊಡುವ ಕಪ್ಪಗಳು ಹರಿಗೆ ಕೊಟ್ಟೆವು ಎನ್ನಿ'** ಎಂಬ ಅನುಸಂಧಾನ ಬೋಧೆಯಿಂದ, ವಿಜಯದಾಸರ ದೇಶಭಕ್ತಿ ಅನನ್ಯವಾದುದೆಂದು ಗ್ರಹಿಸಬಹುದಾಗಿದೆ.

ಹೀಗೆ ವಿಜಯದಾಸರ ಜೀವನ ಮತ್ತು ಕೃತಿಗಳ ಸಮೀಕ್ಷೆಯಿಂದ ಜ್ಞಾನ, ಭಕ್ತಿ, ವೈರಾಗ್ಯ, ಮಾನವೀಯತೆ, ದಯೆ, ಔದಾರ್ಯ, ಪರೋಪಕಾರ, ತೃಪ್ತಿ, ಶಾಂತಿ, ಕ್ಷಮೆ ಮೊದಲಾದ ಗುಣಗಳನ್ನು ರೂಢಿಸಿಕೊಳ್ಳುವ ಮನಸ್ಸು ನಮಗುಂಟಾಗುತ್ತದೆ.

## ಸ್ನೇಹಪ್ರಭ

### ಎಲ್ಲರನ್ನೂ ಸಮನಾಗಿ ನೋಡುವುದು, ಪ್ರೀತಿಸುವುದು ಸಾಧ್ಯವೇ? ಅದು ಹೇಗೆ?

ಎಲ್ಲರನ್ನೂ ಸಮವಾಗಿ ಪ್ರೀತಿಸಬೇಕೆಂದರೆ, ಯಾರಿಂದಲೂ ಏನನ್ನೂ ಅಪೇಕ್ಷಿಸಬಾರದು ಎಂದು ಶ್ರೀಮಾತೆ ಶಾರದಾದೇವಿಯವರು ಹೇಳುತ್ತಾರೆ. ಯಾವುದನ್ನಾದರೂ ಅಪೇಕ್ಷಿಸಿದರೆ ಅಪೇಕ್ಷಿತ ವಸ್ತುವನ್ನು ಪ್ರೀತಿಸಿದಂತಾಗುತ್ತದೆಯೇ ಹೊರತು ವ್ಯಕ್ತಿಯನ್ನು ಪ್ರೀತಿಸಿದಂತಾಗುವುದಿಲ್ಲ. ವ್ಯಕ್ತಿಯನ್ನು ಪ್ರೀತಿಸಬೇಕಾದರೆ ವಿಷಯವಸ್ತುಗಳ ಅಪೇಕ್ಷೆ ಕಡಮೆಯಾಗಬೇಕು. ನಾವೆಲ್ಲರೂ ಇತರರ ಪ್ರೀತಿಯನ್ನು ಬಯಸುತ್ತೇವೆ. ಹಾಗೆಯೇ ಇತರರೂ ನಮ್ಮ ಪ್ರೀತಿಯನ್ನು ಬಯಸುತ್ತಾರೆ. ನಾವು ಇತರರಿಂದ ಏನನ್ನು ಬಯಸುತ್ತೇವೆಯೋ ಅದನ್ನು ಇತರರಿಗೂ ನೀಡುವಂತಾಗಬೇಕು. ತನ್ನಂತೆಯೇ ಪರರು – ಇದು ಅತ್ಯಂತ ಸ್ವಾಭಾವಿಕ ಸತ್ಯ. "ಇತರರಿಗೆ ಪ್ರೀತಿ ತೋರಿಸುವುದು ನನ್ನ ಬೆಳವಣಿಗೆ ಮತ್ತು ವಿಕಾಸಕ್ಕೆ ಆವಶ್ಯಕ. ಪ್ರೀತಿಯ ಭಾವವೇ ನನಗೆ ಸಂತೃಪ್ತಿಯನ್ನು ನೀಡಬೇಕು" – ಈ ಭಾವ ನಮ್ಮಲ್ಲಿರಬೇಕು. ಅನೇಕ ಕೌಟುಂಬಿಕ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ಮತ್ತು ವೈಯಕ್ತಿಕ ಗೊಂದಲಗಳು, ಮಾನಸಿಕ ಒತ್ತಡಗಳು, ಸಂಕೀರ್ಣತೆಗಳು – ಇವುಗಳಿಂದಾಗಿ ವ್ಯಕ್ತಿಯಲ್ಲಿ ಪ್ರೀತಿಯ ಭಾವವು ಅದುಮಿಡಲ್ಪಡುತ್ತದೆ. ಇತರರ ಪ್ರೀತಿಯನ್ನು ಪಡೆಯದ ಮಕ್ಕಳು ಪ್ರೀತಿಸುವ ಸಾಮರ್ಥ್ಯವನ್ನು ಕಳೆದುಕೊಂಡು, ತಮ್ಮನ್ನು ತಾವು ದ್ವೇಷಿಸಿಕೊಳ್ಳುತ್ತ ಇಡೀ ಸಮಾಜವನ್ನೂ ದ್ವೇಷಿಸುವ ಸ್ಥಿತಿಯನ್ನು ಮುಟ್ಟುತ್ತಾರೆ. ನಮ್ಮ ಪ್ರೀತಿಯ ಮೂಲಕ ಇಂಥವರ ಹೃದಯವನ್ನು ಸ್ಪರ್ಶಿಸಿದಾಗ ಅವರಲ್ಲಿ ಪ್ರೀತಿಯ ಭಾವ ಕೆರಳುತ್ತದೆ. ನಾವು ಇತರರನ್ನು ನಿರಪೇಕ್ಷದೃಷ್ಟಿಯಿಂದ ಪ್ರೀತಿಸಬೇಕಾದರೆ ನಮ್ಮ ಅಹಂಕೇಂದ್ರಿತ ವ್ಯಕ್ತಿತ್ವದಿಂದ, ನಮ್ಮ ಜೈವಿಕ ಅಸ್ತಿತ್ವದ ಪರಿಧಿಯಿಂದ ನಾವು ಹೊರಬರಬೇಕು.

ಎಲ್ಲರನ್ನೂ ಸಮಾನವಾಗಿ ಪ್ರೀತಿಸಬೇಕೆಂಬುದು ನಿಜವಾದರೂ ಪ್ರೀತಿಯನ್ನು ತೋರಿಸುವ ವಿಧಾನ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು. ಕೆಲವರ ವಿಷಯದಲ್ಲಿ ಅತ್ಯಂತ ನಿಕಟವಾಗಿ ನಮ್ಮ ಪ್ರೀತಿಯನ್ನು ವ್ಯಕ್ತಪಡಿಸಬಹುದು, ಕೆಲವರ ವಿಷಯದಲ್ಲಿ ಪರೋಕ್ಷವಾಗಿ (ಉದಾಹರಣೆಗೆ ಪ್ರಾರ್ಥನೆಯ ಮೂಲಕ) ನಮ್ಮ ಪ್ರೀತಿಯನ್ನು ವ್ಯಕ್ತಪಡಿಸಬಹುದು. ಕೆಲವರ ವಿಷಯದಲ್ಲಿ ದಂಡನೆಯ ಮೂಲಕವೂ ಪ್ರೀತಿಯನ್ನು ವ್ಯಕ್ತಪಡಿಸಬಹುದು. ಇನ್ನು ಕೆಲವರ ವಿಷಯದಲ್ಲಿ ಔದಾಸೀನ್ಯವೇ ಪ್ರೀತಿಯ ಅಭಿವ್ಯಕ್ತಿಯಾಗಬಹುದು. ಕೆಲವರು ತಾವು ಒಳ್ಳೆಯವರೆನಿಸಿಕೊಳ್ಳಬೇಕೆಂಬ ಆಸೆಯಿಂದ ಅಪಾತ್ರರಿಗೆ ಅನುಚಿತ ರೀತಿಯಲ್ಲಿ ಪ್ರೀತಿಯನ್ನು ತೋರಿಸಿ ತಾವು ಇರುವ ಸಂಸ್ಥೆಗೂ ಸಮಾಜಕ್ಕೂ ಹಾನಿಯನ್ನುಂಟುಮಾಡುತ್ತಾರೆ. ಹಾಗೆ ಮಾಡಬಾರದು.

(ಬರಹ: ಸ್ವಾಮಿ ನಿತ್ಯಸ್ಥಾನಂದ)